**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ14.07.2026.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎ ಎ ವಕೀಲರಿಂದಃ**

ಪ್ರತಿವಾದಿಗಳು ನಮ್ಮ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ ನಾವು ಬೆಳೆದಿದ್ದ ಕಾಫಿ ಗಿಡ ಮತ್ತು ತೆಂಗಿನ ಮರಗಳಿಗ ಹಾನಿ ಉಂಟುಮಾಡುತ್ತಿರುವುದರಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಸ ನಂ 33 ಆಗಿರುತ್ತದೆ. ಸ ನಂ.33 ರಲ್ಲಿ ಒಟ್ಟು 52 ಎಕರೆ ಜಮೀನು ಇದೆ. ಅದರಲ್ಲಿ ನನಗೆ 2 ವರೆ ಎಕರೆ ಮಂಜೂರಾಗಿರುತ್ತದೆ. ನನಗೆ ಮಂಜೂರಾದ ಜಮೀನು ಮೂಲತಃ ಸರಕಾರಿ ಗೋಮಾಳ ಎಂದರೆ ಸರಿ. ಸ ನಂ .33 ರಲ್ಲಿ 52 ಎಕರೆ ಜಮೀನಿನ ಪೈಕಿ 12 ಎಕರೆ ಜಮೀನು ಈಗಾಗಲೇ ಬೇರೆ ಬೇರೆ ವ್ಯಕ್ತಿಗಳಿಗೆ ಮಂಜೂರಾಗಿದ್ದು 40 ಎಕರೆ ಜಾಗ ಸರಕಾರಿ ಗೋಮಾಳ ವಾಗಿ ಉಳಿದಿದೆ. ಸದರಿ ಸರಕಾರಿ ಗೋಮಾಳದಲ್ಲಿ ಪ್ರತಿವಾದಿಯವರಿಗೂ ಸಹ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನನಗೆ ಮಂಜೂರಾದ ಜಮೀನಿನ ಆಜುಬಾಜಿನಲ್ಲಿ ಪ್ರತಿವಾದಿಗಳ ಸ್ವಾಧೀನದಲ್ಲಿ ಯಾವುದೇ ಜಮೀನು ಇಲ್ಲ. ನನ್ನ ದಾವಾ ಷಡ್ಯೂಲ್ ನಲ್ಲಿ ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿಗಳ ಜಮೀನು ಎಂದು ಕಾಣಿಸಲಾಗಿದ್ದು, ಪ್ರತಿ ವಾದಿಯವರು ನಮ್ಮ ಸ್ವತ್ತಿನ ಬೇಲಿಯ ನಂತರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಇದ್ದಾರೆ. ನಮ್ಮ ಮತುತ ಪ್ರತಿವಾದಿಯವರ ಸ್ವತ್ತಿನ ನಡುವೆ ಬೇಲಿ ಇದೆ ಎಂದರೆ ಸರಿ. ಪ್ರತಿವಾದಿಯವರು ಒಂದು ಗುಂಟೆ ಜಮೀನಿನಲ್ಲಿ ಮನೆ ಕಟ್ಟಿ ಸ್ವಾಧೀನದಲ್ಲಿ ಇದ್ದಾರೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯವರಿಗೆ ಸೇರಿದ ಗೋಬರ್ ಗ್ಯಾಸ್ ಮತ್ತು ಅಂಗಡಿ ಇತ್ತು ಎಂದರೆ ಸರಿಯಲ್ಲ.

ಸ ನಂ 33 ದುರಸ್ಥಿ ಪೋಡಿ ಆಗಿರುವುದಿಲ್ಲ. ದಾವಾ ಆಸ್ತಿಯನ್ನು ಸರಕಾರದವರು ಸರ್ವೆ ಮಾಡಿ ನಮಗೆ ಮಂಜೂರು ಮಾಡಿರುತ್ತಾರೆ. ಸರ್ವೆ ಮಾಡಿದ ಬಗ್ಗೆ ನಕಾಶೆ ಇದ್ದು, ಅದನ್ನು ನಾನು ಹಾಜರುಪಡಿಸಿದ್ದೇನೆ. 2004ನೇ ಇಸವಿಯಲ್ಲಿ ಸ್ವತ್ತನ್ನು ಮಂಜೂರು ಮಾಡು ಪೂರ್ವದಲ್ಲಿ ಸರ್ವೆ ಮಾಡಿದ್ದು, ಆದಾದ ನಂತರ ನಾನು ಜಮೀನಿನ್ನು ಸರ್ವೆ ಮಾಡಿಸಿರುವುದಿಲ್ಲ. ಪೋಡಿಯಾಗದೆ ಇರುವುದಂರಿದ ಸ್ವತ್ತಿನ ಆಜುಬಾಜಿನಲ್ಲಿ ಯಾರ ಸ್ವತ್ತು ಇದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**